ಕಾರಣ..! ತಿಳಿಯಲೇಬೇಕಿದ್ದರೆ ನೀವೆಲ್ಲ ಆಧುನಿಕ ಕಾಲಕ್ಕೆ ಸೇತುವೆಯಾದ ಅನಾದಿ ಕಾಲದ ಹಲವು ಬಂಗಾರಿಯರ ಕಲ್ಯಾಣ ಕಥನಕ್ಕೆ ಹಾಜರಿರಲೇಬೇಕು! ರೆಡಿ ಇದ್ದೀರಲ್ಲ? ಬನ್ನಿ, ರಥವೇರಿ...

ಥೈತ ಥೈತ ಥೈತ ಥೈತ ಧಿನ್ನ ತೇಂ...

* * *

ಹ್ಞಾಂ.. ಇವಳೇ ತಲೆಮಾರಿನ ಮುತ್ತಜ್ಜಿ. ತೊಟ್ಟಿಲ ಎಳೆಬೆಣ್ಣೆ. ಕನಕಾಂಗಿ ಅಂತ ಹೆಸರಿಟ್ಟು ಇನ್ನೂ ತಿಂಗಳಿಲ್ಲ! ಹನ್ನೆರಡರ ಸೋದರಮಾವನಿಗೆ ಹಕ್ಕಿನ ವಧುವಾದವಳು. ಬದುಕಿನುದ್ದಕ್ಕೂ ಅಜ್ಜಿಮನೆಯೇ ಅತ್ತೆಮನೆಯಾಗಿ ಹಲವು ಸಂತಾನಗಳ ಇಳೆಗೆ ಇಳಿಸಿ ತನ್ನತನವನ್ನೆಲ್ಲ ಕುಟುಂಬಕ್ಕೆ ಧಾರೆಯೆರೆದು 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ' ಶ್ಲೋಕದ ಉಗಮಕ್ಕೆ ಕಾರಣಳಾಗಿ ತುಂಬು ಜೀವನ ನಡೆಸಿದವಳು.

ಹೌದು! ಈಕೆಯೇ ಅಜ್ಜಿ. ಹೆಸರು ರತ್ನಾಂಗಿ. ಕುಂಟಾಬಿಲ್ಲೆಯ ಎಂಟರ ಬಾಲೆ. ಪರರ ಮನೆ ಒಲೆಯ ಬೂದಿ ತೋಡುವ ಕೈಗೆ ಸ್ಲೇಟು ಬಳಪ ಯಾಕೆ? ರೂಪವೋ ದೇವಲೋಕದ ರಂಭೆ! ಇಷ್ಟು ಸಾಕಲ್ಲವೇ ತವರ ಸೆರಗಿನ ಕೆಂಡಕ್ಕೆ? ಅಂಡದ ಕಟ್ಟೆ ಒಡೆಯುವ ಮುನ್ನ ಕತ್ತಿಗೆ ತಾಳಿ ಬಿಗಿಯುವುದೇ ಸರಿ. ಸಿಕ್ಕೇ ಬಿಟ್ಟ ತುಂಬು ಸಂಸಾರದ ಇಪ್ಪತ್ತೈದರ ಸುರಸುಂದರಾಂಗ ವಿದುರನೊಬ್ಬ. ಮತ್ತೆ ಕನ್ಯಾದಾನಕ್ಕೆ ತಡ ಯಾಕೆ? ಸೀರೆ ಉಡಲು ಬರದಿದ್ದರೂ ಹೊಗುವ ಮನೆಯ ಹೊಸ್ತಿಲು ತುಳಿದು ಸವತಿಯ ಮಕ್ಕಳೆರಡಕ್ಕೆ ಮಲತಾಯಿಯಾಗಿ `ಅಷ್ಟಪುತ್ರವತೀ ಭವ' ಅಂತ ಹರಸಿಕೊಂಡವಳು. ತಕ್ಕಂತೇ ಬದುಕಿ ಒಂದಿಷ್ಟು ಹೆಣ್ಣುಜೀವಗಳನ್ನೂ ಉದುರಿಸಿ ಮಹಾತಾಯಿಯಾದವಳು. ತನ್ನ ಹಾಗೂ ತನ್ನ ಹೆಣ್ಣು ಮಕ್ಕಳ ಬಸಿರು, ಬಾಣಂತನಗಳನ್ನೆಲ್ಲ ಒಟ್ಟೊಟ್ಟಿಗೇ ನಿಭಾಯಿಸಿ 'ಗೃಹಿಣೀ ಗೃಹಮುಚ್ಯತೇ' ಎನ್ನುವ ಪಟ್ಟಕ್ಕೆ ಕಾರಣಳಾದವಳು.



ನಿಜ ನಿಜ. ಈಕೆಯೇ ಅಮ್ಮ. ಥಳ ಥಳ ಹೊಳೆವ ಹೊನ್ನಮ್ಮ! ಕುಟುಂಬದ ಕಿರಿಯ ಮಗಳಾದ್ದರಿಂದ ಹಾಗೂ ಹೀಗೂ ಶಾಲೆಯ ಮೆಟ್ಟಿಲು ತುಳಿದ ಅಗ್ಗಳಿಕೆ. ಹಾಗಂತ ಜಾಸ್ತಿ ಓದಿಸಲುಂಟೆ! ಮುಂದೆ ಕಲ್ಯಾಣಕ್ಕೆ ತಡವಾಗಿ ತಿಂಗಳು ತಿಂಗಳು ಅಂಡ ದಂಡವಾಗುವ ಪಾಪಕ್ಕೆ ಯಾರು ಹೊಣೆ? ಬೇಡಪ್ಪಾ ಬೇಡ. ಅಷ್ಟೋ ಇಷ್ಟೋ ಬಂಗಾರ ಹೊಂದಿಸಿದರಾಯಿತು. ಸಿಕ್ಕನೊಬ್ಬ ಸಕಲಕಲಾ ವಲ್ಲಭಇಪ್ಪತ್ತರ ವರ ಮಹಾಶಯ.. ಹದಿನಾರು ಮೊಳದ ಸೀರೆಯ ಗುಮ್ಮಟದೊಳಗೆ ನೇರವೇರಿತ್ತು ಹತ್ತರ ಬಾಲೆಯ ಸಾಲಂಕೃತ ಕನ್ಯಾದಾನ. ಆಹಾ! ಎಂಥ ಫಲವಂತಿಕೆ! ಪ್ರಥಮ ಅಂಡದಲ್ಲೇ ಪ್ರಥಮ ಗರ್ಭಾಂಕುರ! ಮುಂದೆ ರಜೋನಿವೃತ್ತಿಯಾಗುವ ತನಕವೂ ಪುಂಖಾನುಪುಂಖ ಸಂತಾನೋತ್ಪತ್ತಿ! ಈ ಸಂದರ್ಭಕ್ಕೇ ಅಲ್ಲವೇ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಜೊತೆಯಾದದ್ದು!

ಆಹಾ! ಇವಳೇ ಆ ಸುವರ್ಣ ನಾಮಾಂಕಿತೆಯಾದ ಮಗಳು ಕಲಿಯುಗದ ಬಿಂಬ! ಅಮ್ಮ ಗುಮ್ಮ ಅಂದರೆ ರೇಗುತ್ತಾಳೆ. ಸಹಜವೇ.. ಏಳನೇ ವರ್ಗ ಪಾಸು ಮಾಡಿದ್ದಾಳಲ್ಲ! ಮುಂದೆ ಓದಬೇಕು ಅನ್ನುವಾಗಲೇ ಅವರಮ್ಮನ ಅಷ್ಟಮ ಗರ್ಭದ ಹೆರಿಗೆಯ ದಿನ ಹತ್ತಿರವಾಗಿ ಅಕ್ಷರಶಃ ಇವಳ ವಿದ್ಯೆ ಕೃಷ್ಣಾರ್ಪಣವಾದಂತಾಯಿತು! ಅದೂ ಒಳ್ಳೆಯದೇ. ಜಾಸ್ತಿ ಓದಿದರೆ ಇವಳಿಗಿಂತ ಜಾಸ್ತಿ ಓದಿದ ವರನನ್ನೆಲ್ಲಿ ಹುಡುಕುವುದು? ಈಗೇನೂ ತೊಂದರೆಯಿಲ್ಲ. ಅಷ್ಟೋ ಇಷ್ಟೋ ಕತೆ ಪುಸ್ತಕ ಓದಿಕೊಂಡಿದ್ದಾಳೆ. ತಕ್ಕಮಟ್ಟಿಗೆ ಲೋಕಜ್ಞಾನವೂ ಉಂಟು. ಮನೆಗೆಲಸದಲ್ಲಂತೂ ಅಸಾಧ್ಯ ನಿಪುಣೆ. ಅಲ್ಲದೇ ಅಣ್ಣತಮ್ಮಂದಿರು ಆಗಾಗ್ಗೆ ಹೋಗುವ ಪೌರಾಣಿಕ ಕಥನ ಶ್ರವಣಗಳಿಗೆ ಅಪರೂಪಕ್ಕೊಮ್ಮೆ ಅವರ ಬೆಂಗಾವಲಿನಲ್ಲಿ ಹೋಗಲು ಇವಳಿಗೂ ಅನುಮತಿ ಉಂಟು. ಹೀಗಾಗಿ ಮಹಾಕಾವ್ಯ ಕಥೆಗಳೆಲ್ಲ ಕರತಲಾಮಲಕ. ಹಾಗಂತ ಅದೇ ಒಂದು ಗೀಳಾಗಬಾರದಲ್ಲ ಸ್ತ್ರೀಲಿಂಗಕ್ಕೆ! ಇಷ್ಟಕ್ಕೇ `ಆ ಹೆಣ್ಣು ಹುಟ್ಟುವಾಗಲೇ ಕಾಲಿಗೆ ಚಕ್ರ ಕಟ್ಟಿಕೊಂಡಿದೆ' ಅಂತ ಪ್ರಚಾರವಾಗಿ ಪರಕಾರದಿಂದ ಅರ್ಧಸೀರೆಗೆ ಬಡ್ತಿಹೊಂದಿದರೂ ಅಕ್ಕಂದಿರಂತೆ ಹನ್ನೆರಡು, ಹದಿನಾಲ್ಕಕ್ಕೆಲ್ಲ ಇವಳಿಗೆ ಧಾರಾ ಮುಹೂರ್ತ ಒದಗಿ ಬರಲಿಲ್ಲ! ಅಷ್ಟಲ್ಲದೇ ಸುಮ್ಮನೆ ಹುಟ್ಟಿತೆ ಗಾದೆಮಾತು! 'ಗಂಡಸು ಕೂತು ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು' ಅಂತ? ಜಾತಕ ಹೊರಡಿಸಿ ಹೊರಡಿಸಿ ಸಾಕಾಗಿ ಕೊನೆಗೂ ಸಿಕ್ಕೇಬಿಟ್ಟ ದೂರದೂರಿನ ನೆಂಟನೊಬ್ಬ! ಇವಳ ರೂಪಿಗೆ, ಸಂಪಿಗೆ ಬಣ್ಣಕ್ಕೆ ಮರುಳಾದರೂ ಹೆತ್ತವರ ಅಬ್ಬರದ ಮುಂದೆ ಹೌದಪ್ಪನಂತೆ ಗೋಣು ಅಲ್ಲಾಡಿಸಿದ ಆಜ್ಞಾ ಪರಿಪಾಲಕ! ಗಂಡ್ಹೆತ್ತವರ ಕೊಬ್ಬು ಜಾಸ್ತಿ ಅಂತ ಕನ್ಯಾಪಿತೃಗಳು ಗೊಣಗಿದರೂ ಸರಕಾರಿ ನೌಕರಿಯನ್ನುವ ಅಫೀಮಿಗೆ ಮರುಳಾಗಿ ಅಷ್ಟೋ ಇಷ್ಟೋ ಋಣವೆತ್ತಿ ಕೊನೆಗೂ ಮುಗಿಯಿತು ಇಪ್ಪತ್ತಾರರ ಕುಮಾರನೊಂದಿಗೆ ಹದಿನೆಂಟರ ಕುವರಿಯ ಮಾಂಗಲ್ಯಂ ತಂತು ನಾನೇನಾ... ಮುಂದೆ.. ಅಹಂಕಾರವೋ ದುರಹಂಕಾರವೋ ಈಗಾಗಲೇ ಹುಳಿತು ಹೋಗಿರುವ ಬ್ರಹ್ಮಾಂಡದ ಜೀವಜಾಲಕ್ಕೆ ತಮ್ಮಿಂದ ಅಲಾಯಿದ ಕಾಣಿಕೆ ಬೇಡ ಅನ್ನುವ ಹುಂಬತನದಲ್ಲಿ `ನಾವಿಬ್ಬರು, ನಮಗೊಬ್ಬಳೇ' ಅನ್ನುವ ಕೆಟ್ಟ ಸಂಸಾರ! ಅಲ್ಲ! ಕುಲಪುತ್ರನಿಲ್ಲದ ಬದುಕೂ ಒಂದು ಬದುಕೇ? `ನ ಪುತ್ರಸ್ಯ ಗತಿನರ್ಾಸ್ತಿ' ಸುಮ್ಮನೇ ಸೃಷ್ಟಿಯಾದದ್ದಲ್ಲ ಅಂತ ಮಂಕುದಿಣ್ಣೆಗಳಿಗೆ ಅರ್ಥವಾಗಬೇಕಲ್ಲ? ಪರಿಣಾಮ ಸೋಮಾರಿಯ ತಲೆ ಸೈತಾನನ ನೆಲೆ ಎಂಬಂತೆ ನಿರುದ್ಯೋಗಿ ಗರ್ಭದಲ್ಲಿ ಬೇಡದ ನಾರುಗಡ್ಡೆಗಳ ಉತ್ಪನ್ನ! ಕಟ್ಟಕೊನೆಗೆ, ಮನುಕುಲದ ಆ ಫಲ ಮಂದಿರವನ್ನೇ ಕಿತ್ತು ಬಿಸುಡುವ ಹುನ್ನಾರ! ಛೆ ಛೆ.. ಏನನ್ಯಾಯ?

ಹ್ಞಂ.. ಈಕೆಯೇ ಮೊಮ್ಮಗಳು ಸೋನಾ... ನಮ್ಮ ಈ ಕಥಾಪ್ರಸಂಗದ ರಕ್ಕಸ ನಾಯಕಿ! ವರುಷ ಐವತ್ತಾದರೂ ಲಿಂಗ ಪತ್ತೆಯಾಗದಂಥ ವೇಷಗಾರಿಕೆ! ತಾನುಂಟೋ ಮೂರು ಲೋಕವುಂಟೋ ಅಂತ ಮೆರೆದಾಡುತ್ತಿರುವವಳು. ಪದವಿ ಮುಗಿಸಿ ಕೆಲಸಕ್ಕೆ ಸೇರಿ ಸಮ ವಯಸ್ಸಿನ ಸಹೋದ್ಯೋಗಿಯೊಬ್ಬನೊಂದಿಗೆ ವರ್ಣಸಂಕರದ 'ನೋಂದಣಿ' ಮದುವೆಯಾಗಿ ಮಗುವಾದರೆ ತನ್ನತನವೇ ನಾಸ್ತಿ ಅಂತ ಬಲವಾಗಿ ನಂಬಿದವಳು. ಇಷ್ಟಕ್ಕೂ ತಾಯ್ತನದ ಸಂತೋಷ ಬೇಕು ಅಂತಾದರೆ ಅನಾಥ ಮಗುವೊಂದನ್ನು ದತ್ತಕ ಮಾಡಿಕೊಂಡರಾಯಿತೆಂದು ಪಂಚಮ ವಯದ ಹೆಣ್ಣುಕೂಸೊಂದನ್ನು ಪುತ್ರಿಯಾಗಿ ಸಾಕುತ್ತಿರುವವಳು. ತನ್ನಿಷ್ಟದಂತೆ ದತ್ತಕವಾಗಿದ್ದರೂ ಆ ಮಗಳು ಪ್ರತಿನಿಧಿಸುವುದು ಮಾತ್ರ ಅಪ್ಪನ ಹೆಸರನ್ನೇ ಯಾಕೆ? ಅಂತ ಪುರುಷ ಪ್ರಧಾನ ಸಮಾಜದ ಧೋರಣೆಯ ಬಗ್ಗೆ ಕಿಡಿ ಕಾರುವವಳು. ಇನ್ನು ಆಕೆ ಸಾಕಿದ ಮಿಸುನಿಯ ಕಥೆ ಹೇಗಿದ್ದೀತು ನೀವೇ ಹೇಳಿ?

ನಿಜ.. ಇವಳೇ ಆ ಮರಿ ಮೊಮ್ಮಗಳು ಮಿಸುನಿ! ನಮ್ಮ ಆಡಳಿತಕ್ಕೆ ಸಡ್ಡು ಹೊಡೆದ ಗಟವಾಣಿ! ಇದ್ದ ಬದ್ದ ವಿದ್ಯೆಯನ್ನೆಲ್ಲ ಕಲಿತು ಕೈತುಂಬ ಜಣ ಜಣ ಕಾಂಚಾಣ! ಆದರೆ ವರುಷ ಮೂವತ್ತಾದರೂ ಸ್ವಯಂವರವಿಲ್ಲ! ಜೀವನದಲ್ಲಿ ನೆಲೆಯಾಗುವುದಿಲ್ಲವೋ ಕೇಳಿದರೆ ಯಾಕೆ, ನಾನೀಗ ಬೀದೀಲಿ ಇದೀನಾ? ಮರುಪ್ರಶ್ನೆ ಮಾಡುತ್ತಾಳೆ.

ಹಾಗಲ್ಲ ಮದುವೆ, ಕಲ್ಯಾಣ ಇತ್ಯಾದಿ' ಅನುನಯಿಸಿ ಕೇಳಿದರೆ ಮದುವೆ! ಹಾಗಂದರೇನು? ನಮ್ಮತನವನ್ನೆಲ್ಲ ಇನ್ನೊಬ್ಬರಿಗೆ ಒತ್ತೆ ಇಡುವುದಾ?' `ಮತ್ತೆ ಸಂತಾನ?' `ಹೀಗೋ ಸಮಾಚಾರ! ಯಾಕೆ, ನಿಮಗೆ ಗೊತ್ತಿಲ್ಲವೋ ಇಷ್ಟ ಬಂದವರೊಡನೆ ಸಹಬಾಳ್ವೆ ಮತ್ತು ಏಕ ಪೋಷಕ ವ್ಯವಸ್ಥೆ ಎರಡೂ ಈಗ ಚಾಲ್ತಿಯಲ್ಲಿರುವುದು?

ಒಹೋಯ್.. ನೋಡಿಯಾಯ್ತಲ್ಲ ಪ್ರಸಂಗವನ್ನ? ಅಲ್ಲ, ಹೀಗಾದರೆ ಹೇಗೆ ಅಂತ? ನಮ್ಮ ಮನು ಸಂತಾನ ಅನ್ನುವ ಶಾಶ್ವತ ಹೆಸರಿನ ಗತಿಯೇನು? ಅದಕ್ಕೇ ಎಲ್ಲೆಲ್ಲಿ ಒಂಟೊಂಟಿ ಬಂಟಿಯರು ಇರುತ್ತಾರೋ ಅಲ್ಲೆಲ್ಲ ನಮ್ಮ ಪರಮಾಪ್ತ ಬಂಟರನ್ನು ಕಳಿಸಿ ನಿರ್ದಿಷ್ಟ ದಾಳಿಯಂಥ ಬೃಹದ್ಯೋಜನೆಯ ಮಂತ್ರಾಲೋಚನೆಗೋಸ್ಕರ ಈ ಗೌಪ್ಯ ಒಡ್ಡೋಲಗ!

ಅರ್ಥ! ಆಯಿತಾ?